ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೆ. ಟಿ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1582

ಉತ್ತರ ದಿನಾಂಕ : 24.09.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಜಲ ಜೀವನ್ ಮಿಷನ್ ಯೋಜನೆ (JJM) ಯಾವಾಗ ಜಾರಿಗೆ ಬಂದಿದೆ; ಇದರ ರೂಪುರೇಷೆಗಳೇನು; ಇದರಲ್ಲಿ BRC/CRC ಹುದ್ದೆಗಳ ಪ್ರಸ್ತಾಪ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವಾಗ ಬಂದಿದೆ.	ಜಲ ಜೀವನ್ ಮಿಷನ್ ಯೋಜನೆ (JJM) **ಆಗಸ್ಟ್ 15, 2019**ರಂದು ಜಾರಿಗೆ ಬಂದಿದೆ. 2024ನೇ ವರ್ಷದೊಳಗೆ ದೇಶದ ಪ್ರತಿಯೊಬ್ಬ ನಾಗರೀಕನಿಗೂ ಪ್ರತಿ ದಿನ 55ಲೀ. ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ಪೂರೈಸಲು ಪ್ರತಿ ಮನೆಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಮಹತ್ವಾಕಾಂಕ್ಷೆ ಹೊಂದಿದೆ. ಇದರಲ್ಲಿ BRC/CRC ಹುದ್ದೆಗಳ ಬಗ್ಗೆ ಪ್ರಸ್ತಾಪ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ.	ಸರ್ಕಾರದ ಗಮನಕ್ಕೆ ಬಂದ ನಂತರ ಇಲಾಖೆಯು ಕೇಂದ್ರ ಸರ್ಕಾರಕ್ಕೆ ಇದರ ಸಂಬಂಧ ಏಕೆ ಪತ್ರ ಬರೆದು ಪ್ರಸ್ತಾಪ ಮಾಡಿರುವುದಿಲ್ಲ;	**'ರಾಷ್ಟ್ರೀಯ ಜಲ ಜೀವನ್ ಮಿಷನ್'** ಯೋಜನೆಯಲ್ಲಿ BRC ಮತ್ತು CRC ಸೇವೆಯ ಬಗ್ಗೆ ಮಾರ್ಗಸೂಚಿಯಲ್ಲಿ ಪರಿಕಲ್ಪನೆ ಇರುವುದಿಲ್ಲ.
ಇ.	ಇದರಿಂದ 800 ಗ್ರಾಮೀಣ ಪದವೀಧರ ಸಿಬ್ಬಂದಿಗಳ ಜೀವನ ಭವಿಷ್ಯ ಅತಂತ್ರವಾಗಿರುವುದು ಇಲಾಖೆಯ ಆಯುಕ್ತರ ಗಮನಕ್ಕೆ ಬರಲಿಲ್ಲವೇ; ಬಂದಿದ್ದಲ್ಲಿ ಯಾವ ಕ್ರಮಗಳನ್ನು ವಹಿಸಲಾಗಿದೆ.	ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಯಲ್ಲಿ BRC/CRCಗಳಿಗೆ ಸಂಬಂಧಪಟ್ಟಂತೆ ಕೆಲಸ ಕಾರ್ಯಗಳ ಕುರಿತು ಪ್ರಸ್ತಾಪ ಇರುವುದಿಲ್ಲ.
ಈ.	Policy Decision ಇಲಾಖೆ ಅಥವಾ ಸರ್ಕಾರ ಮಾಡಬೇಕಾಗಿದ್ದು ಇಲ್ಲಿಯವರೆಗೂ BRC/CRC ಗಳ ವಿಚಾರದಲ್ಲಿ Policy Decision ಸರ್ಕಾರ ಮಾಡದಿರಲು ಕಾರಣಗಳೇನು;(ವಿವರವಾದ ಮಾಹಿತಿಯನ್ನು ನೀಡುವುದು)	BRC ಮತ್ತು CRC ಸಂಯೋಜಕರುಗಳ ಸೇವೆಯನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯು (NRDWP) ಮುಕ್ತಾಯಗೊಂಡಿರುವುದರಿಂದ ಸೇವೆಯಲ್ಲಿ ಮುಂದುವರೆಸಲು ಆಗಿರುವುದಿಲ್ಲ.
ಉ	Policy Decisionನ್ನು ಸರ್ಕಾರ ಕರೆ ಮಾಡಿದ 800 ಗ್ರಾಮೀಣ ಪದವೀಧರರ ಕುಟುಂಬಗಳಿಗೆ ಅನುಕೂಲವಾಗುತ್ತಿದೆಯೇ ಇದರಿಂದ ಇಲಾಖೆ/ಇಲಾಖೆಯ ಆಯುಕ್ತರು/ಸರ್ಕಾರಕ್ಕೆ ಆಗುವ ತೊಂದರೆಗಳೇನು;	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ (NRDWP)ಯಡಿ BRC ಮತ್ತು CRC ಸಂಯೋಜಕರ ಸೇವೆಯನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ಸದರಿ ಯೋಜನೆಯು ಮುಕ್ತಾಯಗೊಂಡಿರುವುದರಿಂದ ಸೇವೆಯಲ್ಲಿ ಮುಂದುವರೆಸಲು ಆಗಿರುವುದಿಲ್ಲ. ಸದರಿ BRC ಮತ್ತು CRC ಸಂಯೋಜಕರ ಹುದ್ದೆಯಲ್ಲಿ ಮುಂದುವರೆಸಲು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ರಿಟ್ ಅರ್ಜಿಗಳನ್ನು ಯೋಜನೆ ಮುಕ್ತಾಯಗೊಂಡಿರುವುದರಿಂದ ವಜಾಗೊಳಿಸಿರುತ್ತಾರೆ.
ಊ	ಯಾವ ಕಾಲಮಿತಿಯಲ್ಲಿ Policy Decisionನ್ನು ಸರ್ಕಾರ ಮಾಡಲಾಗುವುದು?	ಉದ್ಭವಿಸುವುದಿಲ್ಲ.

ಸಂ:ಗ್ರಾಕುನೀ&ನೈಇ 251 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು